# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಗಣಕ ಪರಿಷತ್ತು ಸಿದ್ದಪಡಿಸಿದ ಲಿಪಿ ತಂತ್ರಾಂಶ ಮತ್ತು ಅದಕ್ಕೆ ಸಂಬಂಧಿಸಿದ ಹಾಗು ಇತರ ಅನ್ವಯಕ ತಂತ್ರಾಂಶಗಳನ್ನು ಅಭಿವೃದ್ದಿ ಪಡಿಸುವುದು - ಕುರಿತು.

ಓದಲಾಗಿದೆ: ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಇಲಾಖೆ ಯವರ ಪತ್ರ ಸಂಖ್ಯೆ. ಮಾತಂನಿ ೦೦೨/ ಕಸಾಅ. ೨೦೦೦-೦೧/೧೩೧೧ ದಿನಾಂಕ. ೨೦.೧೧.೨೦೦೧

ಮಂಜೂರಾತಿ
Court ......
Case N ......
Produ ......
Admi ......
Mark ......
Ex.No ......
Date: Judge

## ಪ್ರಸ್ತಾವನೆ:

ಮೇಲೆ ಓದಲಾಗಿರುವ ಪತ್ರದಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಕಂಪ್ಯೂಟರ್‌ಗಳಲ್ಲಿ ರಾಜ್ಯದ ಆಡಳಿತ ಭಾಷೆಯಾದ ಕನ್ನಡವನ್ನು ಸಮರ್ಪಕವಾಗಿ ಮತ್ತು ವ್ಯಾಪಕವಾಗಿ ಬಳಸಲು ಅನುಕೂಲವಾಗುವಂತೆ ಈಗಾಗಲೇ ಸರಕಾರವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಅನುಷ್ಠಾನಗೊಳಿಸುತ್ತಿದೆ. ಅದರಂತೆ ಸರಕಾರಿ ಆದೇಶ ಕ್ರಮ ಸಂಖ್ಯೆ. ಮಾತಂಇ ೨೩ ಅಡವಿ ೨೦೦೧ ದಿನಾಂಕ. ೩೧.೦೧.೨೦೦೧ರಲ್ಲಿ ಕನ್ನಡ ತಂತ್ರಂಶಾಗಳ ತ್ವರಿತ ಅಭಿವೃದ್ಧಿಗೆ ಅನುಕೂಲವಾಗುವಂತೆ ನಮೂನೆಗಳು, ಶಿಷ್ಟತೆಗಳನ್ನು ಮತ್ತು ಕನ್ನಡ ಲಿಪಿ ತಂತ್ರಾಂಶವನ್ನು ನಿಗದಿಪಡಿಸಿ ಸೂಚನೆಗಳನ್ನು ನೀಡಲಾಗಿದೆ.

ಈ ತಂತ್ರಾಂಶಗಳನ್ನು ಮತ್ತು ಸೂಚನೆಗಳ ಅನುಸಾರ ಕನ್ನಡ ಲಿಪಿ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ಕೆಲಸವನ್ನು ಸರಕಾರಿ ಆದೇಶ ಕ್ರಮಾಂಕ. ಮಾತಂಇ ೨೩ ಅಡವಿ ೨೦೦೧ ದಿನಾಂಕ. ೩೧.೦೧.೨೦೦೧ರಲ್ಲಿ ಕನ್ನಡ ಗಣಕ ಪರಿಷತ್ತಿಗೆ ವಹಿಸಲಾಗಿದೆ. ಇದರ ಅನುಸಾರ ಗಣಕ ಪರಿಷತ್ತು ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸಿದ್ದು ಅದನ್ನು ಅಧಿಕೃತವಾಗಿ ಬಿಡುಗಡೆ ಮಾಡುವ ಹಂತದಲ್ಲಿದ್ದಾಗ, ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಿದ ಲಿಪಿತಂತ್ರಾಂಶಗಳನ್ನು ಒಂದು ಪೂರ್ಣ ಉತ್ಪನ್ನವಾಗಿ ಮಾಡಿ ಸರಕಾರದ ಕಛೇರಿಗಳಲ್ಲಿ ದೈನಂದಿನ ಕೆಲಸಗಳಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಬಳಸಲು ಅಗತ್ಯವಾದ ಕೆಲವು ಅನ್ವಯಕ ತಂತ್ರಾಂಶಗಳನ್ನು ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಿ ಕಾಲಕಾಲಕ್ಕೆ ಅದನ್ನು ಉತ್ತಮಪಡಿಸುವ ಹಾಗು ಇನ್ನಿತರ ಅನ್ವಯಕ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ಅದನ್ನು ಸರಕಾರಕ್ಕೆ ಸಲ್ಲಿಸುವಂತೆ ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿಯವರು ಸಲಹೆ ಮಾಡಿದ್ದು, ಇದನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಎರಡು ಸಭೆಗಳಲ್ಲಿ ಚರ್ಚಿಸಿ ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿಯವರ ಸಲಹೆಯನ್ನು ಅನುಮೋದಿಸಿ, ಅದರಂತೆ ಕ್ರಮತೆಗೆದುಕೊಳ್ಳಲು ಕನ್ನಡ ಗಣಕ ಪರಿಷತ್ತನ್ನು ಕೋರಲಾಯಿತು ಎಂದು ತಿಳಿಸುತ್ತಾ, ಈ ಹಿನ್ನೆಲೆಯಲ್ಲಿ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಬೇಕಾದ ತಂತ್ರಾಂಶಗಳ ಪಟ್ಟಿ, ಬೇಕಾಗುವ ಕಾಲಾವಧಿ ಮತ್ತು ತಗಲುವ ಅಂದಾಜು ವೆಚ್ಚಗಳನ್ನೊಳಗೊಂಡ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ವಿವರಗಳನ್ನು ಒದಗಿಸಿರುವುದಾಗಿ ತಿಳಿಸಿರುವರು.

COURT OF THE CITY CIVIL AND SESSIONS JUDGE BENGALURU
Public Information Officer
DPAR (e-Governance)

(24)

ಗಣಕ ಪರಿಷತ್ತು ಸಲ್ಲಿಸಿರುವ ೨೨ ಕೆಲಸಗಳ ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಮಾಹಿತಿ ತಂತ್ರಜ್ಞಾನ ನಿರ್ದೇಶಕರು ಮೊದಲಹಂತದಲ್ಲಿ ಅನುಬಂಧದಲ್ಲಿ ತಿಳಿಸಿರುವ ೧೬ ಕೆಲಸಗಳನ್ನು ಒಟ್ಟು ರೂ. ೨೭.೬೫ ಲಕ್ಷದ ವೆಚ್ಚದಲ್ಲಿ 'ಲಾಭವೂ, ಇಲ್ಲ, ನಷ್ಟವೂ ಇಲ್ಲ' ಎಂಬ ಆಧಾರದಮೇಲೆ ನಿರ್ವಹಿಸಲು ಗಣಕ ಪರಿಷತ್ತಿಗೆ ವಹಿಸಿವಂತೆ ಶಿಫಾರಸ್ಸುಮಾಡಿ, ಈ ಬಗ್ಗೆ ಸರಕಾರದ ಒಪ್ಪಿಗೆಯನ್ನು ಕೋರಿರುವರು. ಈ ೧೬ ಕೆಲಸಗಳು ದಿನಾಂಕ. ೨೩.೧೦.೨೦೦೧ರಂದು, ಮಾನ್ಯ ಮಾಹಿತಿ ತಂತ್ರಜ್ಞಾನ ಸಚಿವರು ಬಿಡುಗಡೆ ಮಾಡಿದ ಕನ್ನಡ ಕ್ರಿಯಾಯೋಜನೆಯಲ್ಲಿ ನಮೂದಾಗಿದೆ ಎಂದೂ ಮಾಹಿತಿ ತಂತ್ರಜ್ಞಾನ ನಿರ್ದೇಶಕರು ತಿಳಿಸಿರುವರು. ಮೇಲೆ ತಿಳಿಸಿದ ವೆಚ್ಚವನ್ನು ತಲಾ ೫.೦೦ ಲಕ್ಷ ರೂಗಳ ೫ ಕಂತುಗಳಲ್ಲಿ ಹಾಗು ೨.೬೫ ಲಕ್ಷ ರೂಗಳ ಒಂದು ಕಂತಿನಲ್ಲಿ ಕೆಲಸಪ್ರಗತಿಯನ್ನಾಧರಿಸಿ ಗಣಕ ಪರಿಷತ್ತಿಗೆ ಪಾವತಿಸಲಾಗುವುದು ಹಾಗು ಈ ವೆಚ್ಚವನ್ನು K-BITSಗೆ ಈಗಾಗಲೆ ಬಿಡುಗಡೆ ಮಾಡಿರುವ ರೂ. ೨೦.೦೦ ಲಕ್ಷದ ಅನುದಾನದಿಂದ ಭರಿಸಲಾಗುವುದೆಂದು ತಿಳಿಸಿ, ಈ ಎಲ್ಲಾ ತಂತ್ರಾಂಶಗಳು ಸರಕಾರದ ಒಡೆತನದಲ್ಲಿರುತ್ತವೆ ಎಂದು ತಿಳಿಸಿರುವರು.

ಮಾಹಿತಿ ತಂತ್ರಜ್ಞಾನ ನಿರ್ದೇಶಕರ ಪ್ರಸ್ತಾವನೆಯನ್ನು ಸರಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ನೀಡಿದೆ.

**ಸರಕಾರದ ಆದೇಶ ಸಂಖ್ಯೆ: ಮಾತಂಇ ೨೩೪ ಅಡವಿ ೨೦೦೧**

**ಬೆಂಗಳೂರು, ದಿನಾಂಕ. ೨೭.೧೨..೨೦೦೧**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕನ್ನಡ ಗಣಕ ಪರಿಷತ್ತು ಪ್ರಸ್ತಾಪಿಸಿರುವ ೨೨ ಕೆಲಸಗಳ ಪೈಕಿ ಅನುಬಂಧದಲ್ಲಿ ಕಾಣಿಸಿರುವ ೧೬ ಕೆಲಸಗಳನ್ನು 'ಲಾಭವೂ ಇಲ್ಲ, ನಷ್ಟವೂ ಇಲ್ಲ' ಎಂಬ ಆಧಾರದ ಮೇಲೆ ಒಟ್ಟು ೨೭.೬೫ ಲಕ್ಷ ರೂಗಳು (ಇಪ್ಪತ್ತೇಳು ಲಕ್ಷದ ಅರವತ್ತೈದು ಸಾವಿರ) ಮಾತ್ರ ವೆಚ್ಚದಲ್ಲಿ ನಿರ್ವಹಿಸಲು ಕನ್ನಡ ಗಣಕ ಪರಿಷತ್ತಿಗೆ ವಹಿಸಲು ಸರಕಾರದ ಅನುಮತಿಯನ್ನು ನೀಡಲಾಗಿದೆ. ಕೆಲಸದ ಪ್ರಗತಿಯನ್ನಾಧರಿಸಿ ಗಣಕ ಪರಿಷತ್ತಿಗೆ ಮೇಲೆ ಹೇಳಿದ ಮೊತ್ತವನ್ನು ತಲಾ ೫ ಲಕ್ಷ ರೂಗಳ ೫ ಕಂತು ಹಾಗು ೨.೬೫ ಲಕ್ಷ ರೂ ಗಳ ಒಂದು ಕಂತಿನಲ್ಲಿ ಪಾವತಿಮಾಡಲು ಹಾಗು ಒಟ್ಟು ವೆಚ್ಚವನ್ನು K-BITSಗೆ ಈಗಾಗಲೆ ಒದಗಿಸಲಾಗಿರುವ ರೂ. ೨೦.೦೦ ಲಕ್ಷ ರೂ ಗಳ ಅನುದಾನದಿಂದ ಭರಿಸಲೂ ಅನುಮತಿ ನೀಡಲಾಗಿದೆ.

ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸುವ ಸದರಿ ತಂತ್ರಾಂಶಗಳು ಒಡೆತನವು ಸಂಪೂರ್ಣವಾಗಿ ಸರಕಾರದ್ದಾಗಿರತಕ್ಕದು.

COURT OF THE CITY CIVIL AND SESSIONS JUDGE BENGALURU

Information Officer (e-Governance)

೩ (23)

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ ೧ ಟಿಎಫ್‌ಪಿ ೯೬, ದಿನಾಂಕ. ೧೦[illegible]೦೭.೯೬ರಲ್ಲಿ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಪ್ರತ್ಯಾಯೋಜನೆಯ ಅಧಿಕಾರ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

K.M. Anand 27-11
(ಕೆ.ಎಂ.ಆನಂದ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಇಲಾಖೆ.

ಪ್ರತಿಗಳು:

೦೧. ಮಹಾಲೇಖಪಾಲರು, (ಆಡಟ್ಸ್ ಮತ್ತು ಅಕೌಂಟ್ಸ್) ಕರ್ನಾಟಕ, ಬೆಂಗಳೂರು
೦೨. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ
೦೩. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
೦೪. ಪ್ರಧಾನ ಕಾರ್ಯದರ್ಶಿ, ಕನ್ನಡ ಗಣಕ ಪರಿಷತ್ತು, ಬೆಂಗಳೂರು
೦೫. ವ್ಯವಸ್ಥಾಪಕ ನಿರ್ದೇಶಕರು, K-BITS, ಬೆಂಗಳೂರು.
೦೬. ವಾರದ ಗೆಜೆಟ್/ರಕ್ಷಣಾ ಕಡತ/ಇತರೆ ಪ್ರತಿಗಳು.

Public Information Officer
DPAR (e-Governance)

COURT OF THE CITY CIVIL AND SESSIONS JUDGE
BENGALURU